ಗುಲಬರ್ಗ ಜಿಲ್ಲೆಯಲ್ಲಿ ರಸ್ತೆಗಳ ದುರಸ್ತಿ.

1486 (೨೩೪೨)

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಗುಲ್ಬರ್ಗಾ ಜಿಲ್ಲೆಯ, ವಾಗ್ದರಿ ರಿಬ್ಬನ್‌ಪಲ್ಲಿ ರಾಜ್ಯ ಹೆದ್ದಾರಿ ರಸ್ತೆ ಹಾಗೂ ವನಮಾರಂಪಲ್ಲಿ ರಾಯಚೂರು ರಾಜ್ಯ ಹೆದ್ದಾರಿ ರಸ್ತೆಗಳು ಸೇಡಂ ಕ್ಷೇತ್ರದ ವ್ಯಾಪ್ತಿಯಲ್ಲಿ ದೊಡ್ಡ ದೊಡ್ಡ ಕೊರಕಲುಗಳು ಬಿದ್ದು ಹದಗೆಟ್ಟಿರುವ ರಸ್ತೆಗಳ ಮೇಲೆ ಬಸ್ಸುಗಳ, ವಾಹನಗಳ ಸಂಚಾರಕ್ಕೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

2. ಈ ರಸ್ತೆಗಳ ದುರಸ್ತಿಗೆ ಟೆಂಡರಾಗಿ ಗುತ್ತಿಗೆದಾರರಿಗೆ ನೀಡಿದ್ದರೂ, ಇಲಾಖೆಯವರು ಇವುಗಳ ದುರಸ್ತಿ ಕೈಗೆತ್ತಿಕೊಳ್ಳದಿರುವುದರಿಂದ ಪೂರ್ತಿ ಹದಗೆಟ್ಟು ವಾಹನಗಳ, ಬಸ್ಸುಗಳ ಸಂಚಾರಕ್ಕೆ ತೊಂದರೆಯುಂಟಾಗಿರುವುದು ನಿಜವಲ್ಲವೆ?

3. ಈ ರಸ್ತೆಗಳನ್ನು ದುರಸ್ತಿ ಮಾಡಿ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ರಸ್ತೆ ದುರಸ್ತಿಯ ಅವಶ್ಯಕತೆ ಸರ್ಕಾರದ ಗಮನಕ್ಕೆ ಬಂದಿದೆ.

2. ಸಂಚಾರಕ್ಕೆ ತೊಂದರೆಯಾಗಿದೆ.

3. ರೂ.೭೫ ಕೋಟಿ ಕಾರ್ಯಕ್ರಮದಲ್ಲಿ ವಾಗ್ದಾರಿ ರಿಬ್ಬನ್‌ಪಲ್ಲಿ ರಾಜ್ಯ ಹೆದ್ದಾರಿ ಕಿಮೀ. ೧೦೩ ರಿಂದ ೧೦೬ ಹಾಗೂ ವನಮಾರಪಲ್ಲಿ ರಾಯಚೂರು ರಾಜ್ಯ ಹೆದ್ದಾರಿ ರಸ್ತೆ ಕಿಮೀ. ೧೫೪ ರಿಂದ ೧೫೬ ಹಾಗೂ ೧೬೦ ರಿಂದ ೧೬೪ರವರೆಗೆ ಒಟ್ಟು ೯.೦೦ ಕಿಮೀ. ರಸ್ತೆ ಅಭಿವೃದ್ಧಿಪಡಿಸಲಾಗಿದೆ.

ಉಳಿದ ರಸ್ತೆ ರಾಜ್ಯ ಹೆದ್ದಾರಿ ನಿರ್ವಹಣೆಗೆ ಮೂರು ವರ್ಷದ ಅವಧಿಗೆ ಟೆಂಡರ್ ಮೇಲೆ ನೀಡಲಾಗಿದ್ದು ಈ ರಸ್ತೆಯನ್ನು ದುರಸ್ತಿ ಮಾಡಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು.